Strength of registrants who have registered in Mudigere Employment office upto December 1980

460. SMT MOTAMMA (Mudigere).—Will the Minister for Labour be pleased to state.—

(a) the total number of candidates registered their names for employment in Employment Exchange Centre (Plan) at Kalasa, Mudigere Taluk upto the end of December 1980. Out of this, the number of Scheduled Castes/Scheduled Tribes ;

(b) the total number of candidates recommended by the Employment Exchange for interview in Kudremukh Project. Out of this, the number of Seheduled Castes and Scheduled Tribes ;

(c) the total number of candidates selected at the interview. Out of this, the number of Scheduled Castes and Scheduled Tribes ;

(d) According to the reservation rules, whether 18% reservation for Scheduled Caste/Scheduled Tribes are maintained in various categories of employees in Kudremukh Project. If not, the reason and the action taken by the Government ?

SRI A.B. JAKANUR (Minister for Labour).—

(a) (i) The total number of candidtes registered .—2840

(ii) Out of the total number of candidates registered.—

Scheduled Castes	206
Scheduled Tribes	80

(b) (i) The Total number of candidates recommended by the Employment Exchange to Kudremukh Project for interview in 1980.—1000

(ii) Out of them

Scheduled Castes	162
Scheduled Tribes	46

(c) (i) The Total number of Candidates selected in Kudremukh Project during the calendar year 1980 268

(ii) Ou of them

Scheduled Castes	41
Scheduled Tribes	10

(d) No ; The main reasons are as follows.—

(i) Even after trying to fill up the various posts through special advertisement, the response from the candidates was very poor.

(ii) Number of candidates are leaving the employment.

(iii) Selected candidates are not reporting for duty. As the organisation is under the control of Central Government, the action taken by the Central Government is not known to the State Government

ಶ್ರೀಮತಿ ಮೋಟಮ್ಮ.—ಸರ್ಕಾರ ತನ್ನ ಉತ್ತರದಲ್ಲಿ ಕುದುರೇಮುಖ ಯೋಜನೆಯಲ್ಲಿ ಹರಿಜನ ಗಿರಿಜನರಿಗೆ ಶೇಕಡ ೧೮ ನೌಕರಿ ಒದಗಿಸದಿರುವ ಬಗ್ಗೆ ಒಪ್ಪಿಕೊಂಡಿದೆ, ಇದನ್ನು ಸಾಧಿಸುವ ಬಗ್ಗೆ ಏನಾದರೂ ಪ್ರಯತ್ನ ಮಾಡಿದೆಯೇ ಎಂಬುದನ್ನು ಸರ್ಕಾರ ಹೇಳಲಿ.

† ಶ್ರೀ ಎ ಬಿ. ಜಕನೂರ್.—ಉತ್ತರದಲ್ಲಿಯೇ ಇದೆಯಲ್ಲ.

ಶ್ರೀಮತಿ ಮೋಟಮ್ಮ,—ತಮ್ಮ ಉತ್ತರದಲ್ಲಿ ಸಾಕಷ್ಟು ಅಭ್ಯರ್ಥಿಗಳು ಕೆಲಸವನ್ನು ಬಿಟ್ಟುಹೋಗುತ್ತಿದ್ದಾರೆ ಎಂದೂ, ಆಯ್ಕೆಯಾದ ಅಭ್ಯರ್ಥಿಗಳು ಕೆಲಸಕ್ಕೆ ಸೇರದಿರುವುದುಎಂದು ಹೇಳಿದ್ದೀರಿ. ಆದರೆ ಈ ೧೮ ಪರ್ಸೆಂಟ್ ಮೆಂಟೇನ್ ಮಾಡುವ ಬಗ್ಗೆ ಏನು ಪ್ರಯತ್ನ ಮಾಡಿದ್ದೀರೆಂದು ಹೇಳಿಲಿಲ್ಲ.

ಶ್ರೀ ಎ.ಬಿ. ಜಕನೂರ್.—ಇದು ಕೇಂದ್ರ ಸರ್ಕಾರದ ಮಾಸಲಾತಿ ಇದ್ದು, ಕೇಂದ್ರ ಸರ್ಕಾರದ ಉದ್ಯಮದಲ್ಲಿ ಏನು ೧೫ ಪರ್ಸೆಂಟ್ ಹಾಗೂ ವಿಳೂವರೆ ಪರ್ಸೆಂಟ್ ಇದೆ ಆ ಬಗ್ಗೆ ಅದನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀಮತಿ ಮೋಟಮ್ಮ.—ವಿಶೇಷ ಜಾಹೀರಾತುಗಳ ಮುಖಾಂತರ ಅಭ್ಯರ್ಥಿಗಳನ್ನು ವಿವಿಧ ಹುದ್ದೆಗಳಿಗೆ ಭರ್ತಿ ಮಾಡಲು ಪ್ರಯತ್ನಪಟ್ಟರೂ ಕೂಡ. ಅದಕ್ಕೆ ಅಭ್ಯರ್ಥಿಗಳಿಂದ ಬಂದ ಪ್ರತಿಕ್ರಿಯೆ ಬಹು ಕಡಿಮೆ ಎಂದು ಹೇಳಿದ್ದೀರಿ. ಅದು ಯಾವುದು ಆ ವಿಶೇಷ ಜಾಹೀರಾತು ?

ಶ್ರೀ ಎ.ಬಿ. ಜಕನೂರ್.—ನಾವು ವಿಶೇಷ ಜಾಹೀರಾತು ಕೊಡುತ್ತಿದ್ದರೂ ಕೂಡಾ ಸಾಕಷ್ಟು ಜನರು ಬರುವುದಿಲ್ಲ. ಬರಲಿಲ್ಲ ಎಂದಮೇಲೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀಮತಿ ಮೋಟಮ್ಮ.—ಎಷ್ಟು ಜಾಹೀರಾತು ಮಾಡಿದಿರಿ? ಯಾವ ಯಾವ ರೀತಿಯ ಜಾಹೀರಾತು ಮಾಡಿದಿರಿ ?

ಶ್ರೀ ಎ.ಬಿ. ಜಕನೂರ್.—ಆ ವಿಜಾಹೀರಾತು ಪಟ್ಟಿ ನನ್ನಲ್ಲಿ ಇಲ್ಲ. ಪ್ರತಿ ವರ್ಷವೂ ಜಾಹೀರಾತು ಮಾಡುತ್ತಿದ್ದೇವೆ. ಆ ಪಟ್ಟಿ ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀಮತಿ ಮೋಟಮ್ಮ.—ತಾವು ಸೆಲೆಕ್ಟ್ ಮಾಡಿದಂತಹವರಲ್ಲಿ ಎಷ್ಟು ಜನ ಬಿಟ್ಟು ಹೋಗಿದ್ದಾರೆ? ಮತ್ತು ಯಾವ ಯಾವ ಹುದ್ದೆಗಳಲ್ಲಿ ಬಿಟ್ಟುಹೋಗಿದ್ದಾರೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಎಷ್ಟು ಜನ ಬಿಟ್ಟುಹೋದರು ಎಂಬ ಬಗ್ಗೆ ಸರಿಯಾದ ಲೆಕ್ಕ ಇಲ್ಲ. ೭೮-೭೯-೮೦ರಲ್ಲಿ ಎಷ್ಟು ಜನರಿಗೆ ಕೆಲಸ ಕೊಟ್ಟಿದೆ ಎಂಬ ಬಗ್ಗೆ ಮಾಹಿತಿ ಇದೆ.

ಶ್ರೀಮತಿ ಮೋಟಮ್ಮ.—೭೮-೭೯-೮೦ರಲ್ಲಿ ಎಷ್ಟೆಷ್ಟು ಜನ ಬಿಟ್ಟುಹೋಗಿದ್ದಾರೆ ಎಂಬ ಮಾಹಿತಿ ಇರಬೇಕಲ್ಲಾ ?

ಶ್ರೀ ಎ.ಬಿ. ಜಕನೂರ್.—ಅದನ್ನು ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಶೇರ್‌ಖಾನ್.—ಇದು ಒಂದು ಕೇಂದ್ರ ಸರ್ಕಾರದ ಉದ್ದಿಮೆ ಇದ್ದು, ರಾಜ್ಯ ಸರ್ಕಾರ ಇದನ್ನು ಅಧೀನಕ್ಕೆ ತೆಗೆದುಕೊಂಡು ಅದನ್ನು ಕಂಟ್ರೋಲ್ ಮಾಡುವ ಉಸ್ತುವಾರಿ ವಹಿಸಿಕೊಳ್ಳುತ್ತದೆಯೇ ?

MR. SPEAKER.—Your question is a wider question. She has put this question as she comes from that Constituency. Your question is a different one.

SRI C.M. ARUMUGHAM.—Sir, to the question, whether 18% reservation for SCs/STs are maintained in various categories in Kudremukh Project. If not, the reason and the action taken by the Government, the Hon. Minister answers that even after trying to

fill up the various posts through special advertisement. the response from the candidates was very poor.

I want to know what are special advertisements ? Hvae you advertised exclusively for the SCs/Sts in that area ? Have they tried from the Employment Exchange and Directorate of Social Welfare ? What are the special efforts they have taken to do so ? How many candidates so for left the Project ? What was the qualification required for these posts ? I request the Hon. Minister to kindly answer all these things.

ಶ್ರೀ ಎ.ಬಿ.ಜಕನೂರ್.–ಆ ಏರಿಯಾದಲ್ಲಿನ ೨ ತಾಲ್ಲೂಕುಗಳಲ್ಲಿ ಹರಿಜನ ಗಿರಿಜನ ಅಭ್ಯರ್ಥಿಗಳು ಸಿಗದೇ ಇದ್ದರೆ ಬೇರೆ ಕಡೆಗಳಿಂದ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವ ಸಲುವಾಗಿ ಜಾಹೀರಾತು ಮಾಡಿ ಕರೆಸಿಕೊಳ್ಳುತ್ತೇವೆ. ಆಮೇಲೆ ವಿವಿಧಕಾಲದಲ್ಲಿ ಕೆಲಸದಿಂದ ಬಿಟ್ಟುಹೋಗತಕ್ಕಂತಹ ಅಭ್ಯರ್ಥಿಗಳ ಬಗ್ಗೆ ಕೇಳಿದಿರಿ.೧೯೭೯–೮೦ರಲ್ಲಿ ಕಾರ್ಯನಿರ್ವಹಣೆಗಾಗಿ ಗ್ರೂಪ್–ಎ ನಲ್ಲಿ ೧೭ ಹರಿಜನ ಹಾಗೂ ೪ ಗಿರಿಜನರಿಗೆ ಉದ್ಯೋಗ ಪತ್ರವನ್ನು ಕಳುಹಿಸಲಾಯಿತು. ಆದರಲ್ಲಿ ೮ ಜನರು ಮಾತ್ರ ರಿಪೋರ್ಟ್ ಮಾಡಿಕೊಂಡರು ಗ್ರೂಪ್–ಸಿ ನಲ್ಲಿ ೧೨೭ ಹರಿಜನರಿಗೂ ೧೬ ಗಿರಿಜನರಿಗೂ ಉದ್ಯೋಗ ಪತ್ರವನ್ನು ಕಳುಹಿಸಲಾಯಿತು ಅವರಲ್ಲಿ ಕೇವಲ ೧೦೩ ಹರಿಜನರು ೩ ಗಿರಿಜನರು ಹಾಜರಾಗಿದ್ದಾರೆ. ಆದೇ ಕಾಲದಲ್ಲಿ ೩೧ ಹರಿಜನರು ಹಾಗೂ ೬ ಜನ ಗಿರಿಜನರು ಕೆಲಸವನ್ನು ಬಿಟ್ಟು ಹೋದರು ಸಾಕಷ್ಟು ಹರಿಜನಗಿರಿಜನರು ಈ ವರ್ಷ ದಲ್ಲಿ ಬಿಟ್ಟುಹೋದ ಸಂಖ್ಯೆಯನ್ನು ಹೇಳಂತ್ತಿದ್ದೇನೆ. ಇದರಲ್ಲಿ ೪ ವರ್ಗಗಳು ಎಂದು ಮಾಡಿದ್ದೇವೆ. ಗ್ರೂಪ್–ಎ ವೇತನ ರೂ. ೧,೮೦೦ರಿಂದ ೧,೪೦೦ರವರೆಗೆ ಇರುತ್ತದೆ ಗ್ರೂಪ್–ಬಿ ನಾನ್ ಎಕ್ಸಿಕ್ಯೂಟಿವ್ ಕ್ಯಾಟಗರಿ ಇದ್ದು ಇವರಿಗೆ ರೂ. ೯೦೦ಕ್ಕಿಂತಲೂ ಹೆಚ್ಚು ವೇತನ ಬರತ್ತವೆ. ಗ್ರೂಪ್–ಸಿ ನಾನ್ ಎಕ್ಸಿಕ್ಯೂಟಿವ್ ಕ್ಯಾಟಗರಿ ಇದು.೯೦೦ ರೂಪಾಯಿಗಿಂತ ಕಡಿಮೆ ಸಂಬಳ ಇರುತ್ತದೆ. ಗ್ರೂಪ್-ಡಿ ನಲ್ಲಿ ಮೆಸೆಂಜರ್ ಮಂಂತಾದ ಹುದ್ದೆಗಳು ಇದ್ದು ಅವರ ಗರಿಷ್ಟ ವೇತನ ೯೦೦ ರೂಪಾಯಿಗಳನ್ನು ಮೀರದ ಹುದ್ದೆಗಳು. ೯೦೦ ರೂಪಾಯಿಗಳನ್ನು ಮೀರದ ಹುದ್ದೆಗಳನ್ನು ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್‌ಗೆ ಬರೆದು ಅಲ್ಲಿಂದ ಅಭ್ಯರ್ಥಿಗಳನ್ನು ಕರೆಸಿಕೊಳ್ಳಲಾಗುವುದು. ಅಡ್ಮಿನಿಷ್ಟ್ರೇಟಿವ್ ಸ್ಟಾಫ್‌ಗೆ ಡೈರೆಕ್ಟಾಗಿ ಪತ್ರಿಕೆಗಳ ಮೂಲಕ ಜಾಹೀರಾತು ಮಾಡಿ ಆಯ್ಕೆ ಮಾಡಲಾಗುವುದು.

SRI C.M. ARUMUGHAM. — They advertise in the newspapers in order to deprive the legitimate demands of SCs/STs. They ask certificates from the employment exchange at Kalasa stating that candidates are not available. Afterwards, they advertise and recruit. As any time either the Director of Employment Exchange, Bangalore or the Officer in charge of the District Employment Exchange at Kalasa verified and inspected the Kudremuh Office to to know the percentage of SCs/STs and whether they have taken the candidates sponsored by the Employment Exchange ? Was there any inspection on their own accord.

ಶ್ರೀ ಎ. ಬಿ. ಜಕನೂರ್.—ಇಪರನ್ನು ತೆಗೆದುಕೊಳ್ಳುವುದಕ್ಕೆ ಮುನ್ನ ಪೇಪರಿನಲ್ಲಿ ಕೊಡುವು ದಲ್ಲದೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೆಂಜ್‌ನಲ್ಲೂ ಕೂಡ ಲಿಸ್ಟ್ ತಯಾರಿಸಿಕೊಳ್ಳುತ್ತಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಲಿಸ್ಟ್ ಅನ್ನು ಸ್ಪಾನ್ಸರ್ಡ್ ಮಾಡಿ ತೆಗೆದುಕೊಂಡಿದ್ದಾರೋ ಇಲ್ಲವೋ ಎಂದು ಮಾನ್ಯ ಸದಸ್ಯರು ಕೇಳುತ್ತಾರೆ. ಅವರು ಕಳುಹಿಸಿಕೊಟ್ಟಂಥಾ ಲಿಸ್ಟ್‌ನಲ್ಲಿ ಬೇಕಾದವರನ್ನು ಸೆಲೆಕ್ಟ್ ಮಾಡಬಹುದು, ಆದರೆ ಅವರು ಕಳುಹಿಸಿದಂಥಾವರನ್ನೇ ಸೆಲೆಕ್ಟ್ ಮಾಡಬೇಕು ಎನ್ನುವು ದೇನೂ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಒಂದು ಸಾವಿರ ಜನ ಇಂಟರ್‌ವ್ಯೂ ಕರೆದಿದ್ದಾರೆ. ಅದರಲ್ಲಿ ಎಸ್. ಸಿ ಯವರು ೧೬೨ ಜನ ಎಸ್.ಟಿ.ಗೆ ಸೇರಿದವರು ೪೬ ಜನ. ನೀವು ಸೆಲೆಕ್ಟ್ ಮಾಡಿರುವುದು ಒಟ್ಟು ೨೬೮ ಜನರನ್ನು ಇದರಲ್ಲಿ ಎಸ್.ಸಿಗೆ ಸೇರಿದವರು ೪೧ ಜನ ಎಸ್ ಟಿ ಗೆ ಸೇರಿದವರು ೧೦ ಜನ. ಇವರೆಲ್ಲಾ ಓಡಿ ಹೋಗಿದ್ದಾರೆ. ನಿಮ್ಮ ಉತ್ತರದಲ್ಲಿ ಇದಕ್ಕೆ ಕಾರಣ ಏನು ಹೇಳಿದ್ದೀರಿ ಎಂದರೆ ಸಾಕಷ್ಟು ಅಭ್ಯರ್ಥಿಗಳು ಕೆಲಸವನ್ನು ಬಿಟ್ಟು ಹೋಗುತ್ತಿದ್ದಾರೆ ಅಂತ ಹೇಳಿದ್ದೀರಿ. ನಾನು ಇದರ ಬಗ್ಗೆ ಕೇಳುವುದು ಇಷ್ಟೆ. ಬೇರೆಯವರು ಎಸ್ ಸಿ. ಮತ್ತು ಎಸ್.ಟಿ. ಅಭ್ಯರ್ಥಿಗಳು ಇಲ್ಲವೇ ಜನರಲ್ ಕ್ಯಾಟಗರೀಸ್‌ನಲ್ಲಿ ಯಾರು ಇದ್ದಾರೆ ಅವರನ್ನಾದರೂ ಕೂಡ ಪುನಃ ಇಂಟರ್‌ವ್ಯೂಗೆ ಕರೆದು ಏತಕ್ಕೆ ಕೆಲಸಕ್ಕೆ ತೆಗೆದುಕೊಳ್ಳಲಿಲ್ಲಾ. ಮತ್ತು ಈ ರೀತಿ ಓಡಿ ಹೋಗುವುದರ ಬಗ್ಗೆ ಸರಿಯಾದ ತನಿಖೆ ಏನಾದರೂ ನಡೆಸಿದ್ದೀರಾ ?

ಶ್ರೀ ಎ ಬಿ. ಜಕನೂರ್.—ಇದರ ಬಗ್ಗೆ ತನಿಖೆ ನಡೆಸಿದೆ. ಅದಕ್ಕೆ ಕಾರಣಗಳನ್ನು ತಿಳಿದು ಕೊಂಡಿದುದರಲ್ಲಿ ಆವರಿಗೆ ಬೇರೆ ಕಡೆಗಳಲ್ಲಿ ಕೆಲಸ ಸಿಕ್ಕಿರಬಹುದು, ಪಟ್ಟಣಗಳಲ್ಲಿ ಕೆಲಸ ಸಿಕ್ಕಿರಬಹುದು ಈ ರೀತಿಯಾಗಿ ಅನೇಕ ಕಾರಣಗಳು ಇವೆ.

SRI C. M. ARUMUGHAM.—Sir. Kudremukh Project is a new Project. I would like to know, whether the Government have visited at any time this project and verified. whether they have followed the reservations for SCs/STs ? It is not for the Central Government ; the action has to be taken by the State Government.

SRI A. B. JAKANUR.—So far, nobody has visited. ಎಷ್ಟೆಷ್ಟು ಜನರನ್ನು ತೆಗೆದುಕೊಳ್ಳುತ್ತಾರೆ, ಆವರು ಎಷ್ಟು ಜನರ ಲಿಸ್ಟನ್ನು ಕಳುಹಿಸಿಕೊಡುತ್ತಾರೆ, ಆದರಲ್ಲಿ ಎಷ್ಟು ಜನರನ್ನು ನೇಮಕ ಮಾಡುತ್ತಾರೆ ಮತ್ತು ಎಷ್ಟು ಜನರು ನೊಂದಾಯಿಸಿದ್ದಾರೆ ಎನ್ನುವ ಅಂಕಿ ಸಂಖ್ಯೆಗಳನ್ನು ನಾವು ಈಗಾಗಲೇ ತಮಗೆ ಒದಗಿಸಿಕೊಟ್ಟಿದ್ದೇವೆ.

ಶ್ರೀ ಮಲ್ಲಾರಿಗೌಡ ಪಾಟೀಲ್.—ಸ್ವಾಮಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಏನು ನೊಂದಾಯಿಸಿದ್ದಾರೆ. ಅವರ ಹತ್ತಿರ ಎಷ್ಟು ಫೀಜ್ ವಸೂಲಾತಿಯಾಗಿದೆ ಅನ್ನುವುದು ಸರ್ಕಾರದಲ್ಲಿದೆಯೇ ? ಆ ಲಿಸ್ಟ್ ಕೊಡುತ್ತೀರಾ ?

SRI A. B. JAKANUR.—It is a different question.

ಶ್ರೀ ಕೆ. ಜಿ. ಶಿವಯ್ಯ,—ಸ್ವಾಮಿ, ನಾನು ನಂಜನಗೂಡಿಗೆ ಸಂಬಂಧಪಟ್ಟಂತೆ ಈ ಪ್ರಶ್ನೆ ಕೇಳಿದ್ದೆ ಆದರೆ ಇದರಲ್ಲಿ ಹುಬ್ಬಳ್ಳಿ-ಧಾರವಾಡ ನಗರಕ್ಕೆ ಮಲಪ್ರಭಾ ನೀರು ಯೋಜನೆಗೆ ಸಂಬಂಧಪಟ್ಟಂತೆ ಪ್ರಶ್ನೆ ಇದೆ. ಈ ಪ್ರಶ್ನೆ ನೋಡಿದರೆ ನಾನು ಯಾವುದು ಕೇಳಬೇಕು ಅನ್ನುವುದು ಕಷ್ಟವಾಗಿದೆ. ಆದರೂ ಅದರ ಬಗ್ಗೆ ಕೇಳುತ್ತೇನೆ, ಈ ಹುಬ್ಬಳ್ಳಿ ಧಾರವಾಡ ನಗರಕ್ಕೆ ಮಲಪ್ರಭ ನೀರು ಸರಬರಾಜು ಯೋಜನೆಯ ಕೆಲಸ ಎಷ್ಟು ಬೇಗ ಮುಗಿಯುತ್ತದೆ ಅನ್ನುವುದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.—ತಮಗೆ ಹುಬ್ಬಳ್ಳಿ ಧಾರವಾಡ ನಗರಕ್ಕೆ ಸಂಬಂಧಪಟ್ಟಂತೆ ಇರುವ ವಿಷಯ ಬೇಕೋ ಅಥವಾ ನಂಜನಗೂಡಿಗೆ ಸಂಬಂಧಪಟ್ಟಂತೆ ಇರುವ ವಿಷಯ ಬೇಕೋ ?

ಶ್ರೀ ಕೆ. ಬಿ. ಶಿವಯ್ಯ,—ನನಗೆ ನಂಜನಗೂಡಿಗೆ ಸಂಬಂಧಪಟ್ಟಂತೆ ಇರುವ ವಿಷಯ ಬೇಕು.

MR. SPEAKER.—The question is held over.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಸದಸ್ಯರು ಹುಬ್ಬಳ್ಳಿ ಧಾರವಾಡ ನಗರದ ಬಗ್ಗೆ ಈ ಪ್ರಶ್ನೆ ಹಾಕಿರುವುದರಿಂದ ಆ ಉತ್ತರ ಬಂದಿದೆ, ಆವರು ನಂಜನಗೂಡಿಗೆ ಸಂಬಂಧಪಟ್ಟಂತೆ ಪ್ರಶ್ನೆ ಹಾಕಿದ್ದರೆ ಅದಕ್ಕೆ ಉತ್ತರ ಬರುತ್ತಿತ್ತು.

MR. SPEAKER.—I will verify it from the records.